# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 913
2) ಸದಸ್ಯರ ಹೆಸರು : ಶ್ರೀ ಶಾಂತಾರಾಮ್ ಬುಡ್ನಾ ಸಿದ್ದಿ (ನಾಮನಿರ್ದೇಶನ ಹೊಂದಿದವರು)
3) ಉತ್ತರಿಸಬೇಕಾದ ದಿನಾಂಕ : 24-07-2024
4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ಮೀನುಗಾರರ ಬೋಟುಗಳು ಲಾಂಚ್ಗಳು ನಾಕಾದೋಣಿಗಳು ಹಾಗೂ ಯಾಂತ್ರಿಕ ದೋಣಿಗಳು ಪ್ರಕೃತಿ ವಿಕೋಪಕ್ಕೆ ತುತ್ತಾದಾಗ ಸರ್ಕಾರ ಕೈಗೊಳ್ಳುವ ಕ್ರಮಗಳೇನು; ಸರ್ಕಾರದಿಂದ ಮೃತ ಕುಂಟುಂಬಕ್ಕೆ ಎಷ್ಟು ಪರಿಹಾರ ನೀಡಲಾಗುತ್ತದೆ; | ಮೀನುಗಾರಿಕೆಯ ವಿವಿಧ ಬಗೆಯ ದೋಣಿಗಳಾದ ನಾಡ ದೋಣಿಗಳು (ಪಾತಿದೋಣಿ), ಮೋಟರೀಕೃತ ದೋಣಿಗಳು ಮತ್ತು ಯಾಂತ್ರೀಕೃತ ಮೀನುಗಾರಿಕಾ ದೋಣಿಗಳು ಪ್ರಕೃತಿ ವಿಕೋಪಕ್ಕೆ ತುತ್ತಾಗಿ ಹಾನಿಗೊಳಗಾದಾಗ ಮೀನುಗಾರರ ಸಂಕಷ್ಟ ಪರಿಹಾರ ನಿಧಿಯಿಂದ ಪರಿಹಾರವನ್ನು ನೀಡಲಾಗುತ್ತದೆ.<br><br>ಪ್ರಸ್ತುತವಾಗಿ, ಮೀನುಗಾರರ ಸಂಕಷ್ಟ ಪರಿಹಾರ ನಿಧಿಯಿಂದ ಈ ಕೆಳಗಿನಂತೆ ಪರಿಹಾರ ನೀಡಲಾಗುತ್ತಿದೆ.<br><br>• ಪ್ರಕೃತಿ ವಿಕೋಪಕ್ಕೆ ತುತ್ತಾಗಿ ಹಾನಿಗೊಳಗಾದ ನಾಡದೋಣಿ / ಮೋಟರೀಕೃತ ದೋಣಿ / ಯಾಂತ್ರೀಕೃತ ದೋಣಿಗಳಿಗೆ ಹಾಗೂ ಬಲೆ ಇನ್ನಿತರ ಸ್ವತ್ತುಗಳ ಹಾನಿಗೆ ಅವುಗಳ ಖರೀದಿ / ದುರಸ್ತಿ ಮೌಲ್ಯದ ಶೇ.50 ರಷ್ಟು ಹಾಗೂ ಗರಿಷ್ಟ ರೂ. 10 ಲಕ್ಷಗಳಿಗೆ ಒಳಪಟ್ಟು ಹಾನಿಯ ಮೌಲ್ಯ ಮಾಪನಕ್ಕೆ ಅನುಗುಣವಾಗಿ ಪರಿಹಾರವನ್ನು ನೀಡಲಾಗುತ್ತಿದೆ.<br><br>• ಮೀನುಗಾರರ ಸಂಕಷ್ಟ ಪರಿಹಾರ ನಿಧಿಯಿಂದ ಮೀನುಗಾರರ ಮರಣ ಪ್ರಕರಣಗಳಲ್ಲಿ, ಮೃತರ ವಾರಸುದಾರರಿಗೆ ರೂ. 8 ಲಕ್ಷ ಪರಿಹಾರ ನೀಡಲಾಗುತ್ತಿದೆ.<br><br>• ಮೀನುಗಾರಿಕೆಯಲ್ಲಿ ತೊಡಗಿರುವಾಗ ಮೀನುಗಾರರು ಶಾಶ್ವತ ಅಂಗವಿಕಲರಾದಲ್ಲಿ ರೂ. 4.00 ಲಕ್ಷ ಪರಿಹಾರವನ್ನು ಮತ್ತು ಭಾಗಶಃ ಅಂಗವಿಕಲರಾದಲ್ಲಿ ರೂ. 2.00 ಲಕ್ಷ ಪರಿಹಾರವನ್ನು ನೀಡಲಾಗುತ್ತಿದೆ.<br><br>• ಮೀನುಗಾರಿಕೆಯಲ್ಲಿ ತೊಡಗಿರುವಾಗ ಅಪಘಾತ ಸಂಭವಿಸಿ ವೈದ್ಯಕೀಯ ಶುಶ್ರೂಷೆಗಾಗಿ ಮಾಡಿದ ವೆಚ್ಚದ ಶೇ. 50 ರಷ್ಟು ಅಥವಾ ಗರಿಷ್ಠ ರೂ.3.00 ಲಕ್ಷಗಳ ಮಿತಿಗೊಳಪಟ್ಟು ಪರಿಹಾರ ನೀಡಲಾಗುತ್ತಿದೆ. |
| ಆ) | ಸರ್ಕಾರದಿಂದಲೇ ತ್ವರಿತ ಗತಿಯಲ್ಲಿ ಕುಂಟುಂಬಕ್ಕೆ ಹೊಸ ಬೋಟ್ ಒದಗಿಸಲು ಅವಕಾಶ ಇದೆಯೇ: ಇಲ್ಲದಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಳ್ಳುವ ಕ್ರಮಗಳೇನು; | ಕುಟುಂಬಕ್ಕೆ ಹೊಸ ಬೋಟ್ ಒದಗಿಸಲು ಅವಕಾಶ ಇರುವುದಿಲ್ಲ ಹಾಗೂ ಪ್ರಸ್ತುತ ಇಂತಹ ಯಾವುದೇ ಪ್ರಸ್ತಾವನೆ ಇರುವುದಿಲ್ಲ. |

| | | |
|---|---|---|
| ಇ) | ಮೀನುಗಾರರಿಗಾಗಿ ಸರ್ಕಾರದಿಂದಲೇ ವಿಮೆ ಮಾಡಿಸುವ ಯೋಜನೆ ಇದೆಯೇ? | ಮೀನುಗಾರರಿಗಾಗಿ ಸಾಮೂಹಿಕ ಅಪಘಾತ ವಿಮಾ ಯೋಜನೆ (GAIS)ಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ವಿಮೆಯ ಪ್ರೀಮಿಯಂ ಮೊತ್ತವನ್ನು ಸಂಪೂರ್ಣವಾಗಿ ಸರ್ಕಾರದಿಂದಲೇ ಭರಿಸಲಾಗುತ್ತಿದೆ.<br>• ಮೀನುಗಾರರು ಮೃತಪಟ್ಟ ಸಂದರ್ಭಗಳಲ್ಲಿ ರೂ 5.00 ಲಕ್ಷ ವಿಮೆ ಮೊತ್ತವನ್ನು ನೀಡಲಾಗುತ್ತಿದೆ.<br>• ಮೀನುಗಾರರು ಪೂರ್ಣವಾಗಿ ಅಂಗವಿಕಲರಾದಲ್ಲಿ, ರೂ. 5.00 ಲಕ್ಷ ಮತ್ತು ಭಾಗಶಃ ಅಂಗವಿಕಲರಾದಲ್ಲಿ ರೂ. 2.50 ಲಕ್ಷ ವಿಮಾ ಮೊತ್ತವನ್ನು ನೀಡಲಾಗುತ್ತಿದೆ.<br>• ವೈದ್ಯಕೀಯ ಶುಶ್ರೂಷೆ ವೆಚ್ಚಕ್ಕಾಗಿ ರೂ. 0.25 ಲಕ್ಷ ವಿಮಾ ಮೊತ್ತವನ್ನು ನೀಡಲಾಗುತ್ತಿದೆ. |

ಸಂಖ್ಯೆ: ಪಸಂಮೀ ಇ-147 ಮೀಇಯೋ 2024

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು